**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

---

ಸಿ.ಸಿ. ನಂ. : 94/2016 ದಿನಾಂಕಃ 22.06.2026

ಪಿ ಡಬ್ಲೂ : 1

---

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ . ಕೆ ಎ ವಿ ವಕೀಲರಿಂದಃ**

1. ಶ್ರೀಕಾಂತ ನನ್ನ ಮಗಳ ಗಂಡ ಮತ್ತು ನನ್ನ ಅಣ್ಣನ ಮಗ. ನಮ್ಮ ಅಣ್ಣ ಸದಾಶಿವ ಮರಣ ಹೊಂದಿರುತ್ತಾನೆ. ನನ್ನ ಮಗಳು ನನ್ನ ಅಳಿಯ ಶ್ರೀಕಾಂತನ ವಿರುದ್ದ ಜೀವನಾಂಶ ಕೋರಿ ದಾವೆಯನ್ನು ದಾಖಲಿಸಿದ್ದಳು ಎಂದರೆ ಸರಿ . ನನ್ನ ಸದಾಶಿವನ ಮರಣದ ನಂತರ ನಾನು ನನ್ನ ಅಣ್ಣನ ಹೆಂಡತಿ ಮತ್ತು ಮಕ್ಕಳ ವಿರುದ್ದ ಪಾಲು ವಾಟ್ನಿ ದಾವೆಯನ್ನು ಸಲ್ಲಿಸಿದ್ದೆನು ಎಂದರೆ ಸರಿ . ಸದರಿ ಪಾಲು ವಾಟ್ನಿ ದಾವೆ ಸಲ್ಲಿಸಿದ ನಂತರ ಈ ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಶ್ರೀಕಾಂತ ಈತನು ನನ್ನ ಮಗಳ ವಿರುದ್ದ ನನ್ನೊಂದಿಗೆ ಜೀವನ ಮಾಡಲು ಕೋರಿ ಪ್ರಕರಣ ದಾಖಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ. ಆರೋಪಿತನು ತನ್ನ ಹೆಂಡತಿ ಆತನೊಂದಿಗೆ ಸರಿಯಾಗಿ ಜೀವನ ಮಾಡದ್ದರಿಂದ ಆತನು ಮಾನಸಿಕವಾಗಿ ನೊಂದು ಅಸ್ವಸ್ಥನಾಗಿರುತ್ತಾನೆ ಎಂದರೆ ಸರಿಯಲ್ಲ. ಘಟನೆ ನಡೆದ ಸಮಯದಲ್ಲಿ ನಮ್ಮ ಮನೆಯ ಅಕ್ಕಪಕ್ಕ ಮನೆಗಳು ಇರಲಿಲ್ಲ ಈಗ ಸುಮಾರು ಮನೆಗಳು ಆಗಿರುತ್ತವೆ. ಆಸ್ಪತ್ರೆಯಲ್ಲಿ ಯಾವ ದಿನಾಂಕ , ವರ್ಷದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಅಂತಾ ನನಗೆ ನೆನಪಿಲ್ಲ. ಆರೋಪಿತನು ಯಾವ ದಿನಾಂಕದಂದು ನಮಗೆ ಹೊಡೆ ಬಡೆ ಮಾಡಿರುತ್ತಾನೆ ಅಂತಾ ನನಗೆ ನೆನಪಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಪಿರ್ಯಾದಿಯಲ್ಲಿ ಯಾವ ದಿನಾಂಕದಂದು ಘಟನೆ ಆಗಿದೆ ಅಂತಾ ಹೇಳಿ ಬರೆಸಿರುತ್ತೇನೆ ಅಂತಾ ನನಗೆ ಗೊತ್ತಿಲ್ಲ. ಮದುವೆಯಾದ ದಿನದಿಂದ ನನ್ನ ಮಗಳನ್ನು ನಮ್ಮ ಮನೆಯಲ್ಲೆ ಇಟ್ಟುಕೊಂಡಿರುತ್ತೇನೆ ಎಂದರೆ ಸ್ವಲ್ಪ ದಿನ ಅವರ ಮನೆಗೆ ಕಳುಹಿಸಿ ಅವರು ಸರಿಯಾಗಿ ಬಾಳ್ವೆ ಮಾಡದ್ದರಿಂದ ನನ್ನ ಮಗಳು ನಮ್ಮ ಮನೆಯಲ್ಲೆ ಇರುತ್ತಾಳೆ . ಭುವನೇಶ್ವರಿ ಇವಳ ಮದುವೆ 9 ವರ್ಷದ ಹಿಂದೆ ಆಗಿರುತ್ತದೆ. ನನ್ನ ಮಗ ನನ್ನ ಹತ್ತಿರ ಇರುವುದಿಲ್ಲ. ನನ್ನ ಮಗ ನನ್ನ ಜೊತೆ ಇರದ ಕಾರಣ ನನ್ನ ಮಗಳನ್ನು ನಾನು ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದು ನನ್ನ ಅಳಿಯ ನನ್ನ ಮಗಳನ್ನು ಮನೆಗೆ ಕರೆಯಲು

ಬರಬಾರದು ಮತ್ತು ಆತನೊಂದಿಗೆ ನನ್ನ ಮಗಳನ್ನು ಕಳುಹಿಸಬಾರದು ಎಂಬ ಉದ್ದೇಶದಿಂದ ನಾನು ಖೊಟ್ಟಿ ದೂರನ್ನು ಆರೋಪಿತನ ವಿರುದ್ದ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.